# ಆಹಾ ಸುದ್ದಿ!

★ ಸಸಿತೋಟ

ಹರ್‍ಯಾಣಾದ ಸುರೀಂದರ್ ಆಟೋ ವರ್ಕ್ಸ್‌ನ ಮಾಲೀಕನಿಗೆ ಕಳೆದ ವಾರ ವಿದ್ಯುತ್ ಬಿಲ್ ರೂಪದಲ್ಲಿ ಆಘಾತ ಕಾದಿತ್ತು. ಸಾಮಾನ್ಯವಾಗಿ 2500 ರೂಪಾಯಿ ಬರುತ್ತಿದ್ದ ಒಂದು ತಿಂಗಳ ಬಿಲ್ ಮೊತ್ತ 77 ಕೋಟಿ ರೂಪಾಯಿ ಎಂದು ನಮೂದಾಗಿದ್ದನ್ನು ನೋಡಿ ಸುರೀಂದರ್ ಮೂರ್ಛೆ ಹೋಗುವುದೊಂದು ಬಾಕಿ. ಆದರೆ ಆತನ ತಾಯಿ ಈ ಬಿಲ್ ನೋಡಿ ಅಸ್ವಸ್ಥರಾಗಿ ಆಸ್ಪತ್ರೆ ಸೇರಿದ್ದು, ವಿದ್ಯುತ್ ಬಿಲ್ ಜೊತೆ ಆಸ್ಪತ್ರೆ ಬಿಲ್ ಚಿಂತೆಯಿಂದಲೂ ಸುರಿಂದರ್ ಹೈರಾಣಾಗಿದ್ದಾನಂತೆ.



ಅಮೆರಿಕಾದಲ್ಲಿ ಕಂಪೆನಿಯೊಂದು ಮಾರುಕಟ್ಟೆಗೆ ಬಿಡುಗಡೆ ಮಾಡಿದ ಕಾಫಿ ತಯಾರಿಕಾ ಯಂತ್ರದ ಸ್ವಿಚ್ ಹಾಕಲೇ ಬೇಕೆಂದಿಲ್ಲ, ಪ್ಲಗ್ ಹಾಕಿದರೂ ಬೆಂಕಿ ಹೊತ್ತಿಕೊಂಡು ಅನಾಹುತ ಮಾಡುತ್ತಿದೆಯಂತೆ. ಹೀಗಾಗಿ ಗ್ರಾಹಕರು ಅದಕ್ಕೆ ತಾವೇ ಬೆಂಕಿ ಇಟ್ಟು ಫೋಟೊ ತೆಗೆದು ಸಾಮಾಜಿಕ ಜಾಲತಾಣದಲ್ಲಿ ಹಾಕುತ್ತಿದ್ದಾರಂತೆ. ತಯಾರಿಕಾ ಯಂತ್ರ ಎನ್ನುವುದೇನೋ ಸರಿ, ಆದರೆ ಕಾಫಿ ಬದಲು ಬೆಂಕಿ ಆಗಬೇಕಿತ್ತು!

ವಿಯೆಟ್ನಾಮಿನ ಈ 'ಭಗ್ನ ಪ್ರೇಮ'ದ ಮಾರುಕಟ್ಟೆಯಲ್ಲಿ ಅದೃಷ್ಟವಿದ್ದರೆ ಯಾರೋ ಕೈಕೊಟ್ಟ ಪ್ರೇಮಿಯ ಪ್ರೇಮಪತ್ರ ಸಿಗಬಹುದು, ಅರ್ಧ ಬಳಸಿದ ಸುಗಂಧದ್ರವ್ಯ ನಿಮ್ಮದಾಗಬಹುದು, ಒಣಗಿದ ಹೂಗಳ ಗೊಂಚಲು ಬೇಡಿಕೆಯಿಲ್ಲದೇ ಅಲ್ಲಿಯೇ ಮುದುರಿ ಬೀಳಬಹುದು. ಪ್ರೇಮಿಗಳು ಕೈಕೊಟ್ಟಾಗ ಯುವಕ/ಯುವತಿ ಹಳೆಯ ಪ್ರೇಮವನ್ನು ಮರೆಯಲು ಉಡುಗೊರೆಗಳನ್ನು ಮಾರಾಟ ಮಾಡಲು ತಿಂಗಳಿಗೊಮ್ಮೆ ಈ ಮಾರುಕಟ್ಟೆಯಲ್ಲಿ ಸೇರುತ್ತಾರಂತೆ. ಮಾರುಕಟ್ಟೆಯಲ್ಲಿ ಹಳೆಯ ಪ್ರೇಮಿ ಸಿಕ್ಕರೆ ಆಕೆಯನ್ನೋ/ ಆತನನ್ನೋ ಮಾರಾಟಕ್ಕಿಟ್ಟ ಸುದ್ದಿ ಇನ್ನೂ ಬಂದಿಲ್ಲ.



ಫ್ಯಾಷನ್ ಪ್ರತಿ ನಿತ್ಯ ಬದಲಾಗುತ್ತಿದೆ. ಕೆಲವೊಮ್ಮೆ ಹಳೆಯದೇ ಮತ್ತೆ ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ಕಾಣಿಸಿಕೊಳ್ಳುತ್ತಿದೆ. ಆದರೆ ಈಗ ಅಮೆರಿಕಾದಲ್ಲಿ ಮೂಗಿನ ತುದಿಯಲ್ಲಿ ಕೂದಲು ಬೆಳೆಸುವ ಫ್ಯಾಷನ್ ಮಾತ್ರ ಆದಿ ಮಾನವನ ಕಾಲದ್ದಿರಬಹುದು. ಯಾರೋ ಒಬ್ಬಾಕೆ ಕೃತಕ ಕಣ್ರೆಪ್ಪೆಯನ್ನು ಮೂಗಿನ ತುದಿಗೆ ಅಂಟಿಸಿಕೊಂಡ ಫೋಟೋವನ್ನು ಸಾಮಾಜಿಕ ಜಾಲತಾಣದಲ್ಲಿ ಹಾಕಿದ್ದೇ ತಡ, ಉಳಿದ ನೀರೆಯರು ಕೃತಕ ಕೂದಲೇಕೆ, ಒರಿಜಿನಲ್ಲೇ ಸಾಕು ಎಂದು ನಾಸಿಕದೊಳಗಿನ ಕೂದಲು ಬೆಳೆಸಿ ಟ್ರೆಂಡ್ ಶುರು ಮಾಡಿದ್ದಾರಂತೆ. ಮೂಗಿನೊಳಗಿನ ಕೂದಲು ಉದ್ದ ಎಂದು ಅಸಹ್ಯಪಟ್ಟುಕೊಳ್ಳುವವರು ಹೆಮ್ಮೆಯಿಂದ ನೀವಿಕೊಳ್ಳಬಹುದು.



ಅಮೆರಿಕಾದಲ್ಲಿ ಈ ಕಳ್ಳ ಕದಿಯಲೆಂದು ವೆಂಟಿಲೇಟರ್ ಮೂಲಕ ಹೊಟೇಲ್‌ವೊಂದಕ್ಕೆ ನುಗ್ಗಲು ಯತ್ನಿಸಿದನಂತೆ. ಆದರೆ ಸಿಕ್ಕಿಹಾಕಿಕೊಂಡು 7 ಗಂಟೆ ಒದ್ದಾಡಿದ ಈತನನ್ನು ಬಿಡಿಸಲು ಬಂದಿದ್ದು ಪೊಲೀಸರೇ. ಕಾನೂನು ಮುರಿದವನನ್ನು ರಕ್ಷಿಸಲು ಬಂದಿದ್ದು ಕಾನೂನು ಪಾಲಕರು. ಆದರೆ ವೆಂಟಿಲೇಟರ್‌ನಿಂದ ಬಿಡುಗಡೆಯಾದರೂ ಪೊಲೀಸರ ಬೇಡಿಯಿಂದ ಬಿಡುಗಡೆಯಾಗಲು ಅದೃಷ್ಟವಿರಲಿಲ್ಲ ಈ ಕಳ್ಳನಿಗೆ.



ಚೀನಾದ ಈ ನವವಿವಾಹಿತ ಜೋಡಿ 330 ಅಡಿ ಎತ್ತರದ ಕಡಿದಾದ ಬಂಡೆಗೆ ಆತುಕೊಂಡು ಫೋಟೊ ತೆಗೆಸಿಕೊಂಡಿದೆ. ಬಂಡೆ ಏರುವ ಸಾಹಸಿಗರು ಈ ಜೋಡಿಗೆ ನೆರವು ನೀಡಿದ್ದಾರಂತೆ. ಮುಂದಿನ ಜೀವನದ ಅಪಾಯಗಳನ್ನು ಊಹಿಸಿಕೊಳ್ಳುವ ಫೋಟೋವನ್ನು ಮದುವೆಯಂತಹ ಶುಭ ಸಂದರ್ಭದಲ್ಲಿ ತೆಗೆಸಿಕೊಳ್ಳಬಾರದಿತ್ತು.